517 (572) ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮುಂಡರಗಿ ತಾಲ್ಲೂಕು ಡೋಣಿ ಗ್ರಾಮ ಪಂಚಾಯತ್‌ನಲ್ಲಿ ಬರಪರಿಹಾರ ಮತ್ತು ಜಲಸಂರಕ್ಷಣೆ ಯೋಜನೆಗಳಲ್ಲಿ ಬಿಡುಗಡೆಯಾದ ಆಹಾರ ಧಾನ್ಯದಲ್ಲಿ ದುರುಪಯೋಗವಾಗಿ ಹಿಂದಿನ ಅಧಿವೇಶನದಲ್ಲಿ ಉತ್ತರ ನೀಡಿರುವುದು ನಿಜವಲ್ಲವೆ; ಹಾಗಿದ್ದಲ್ಲಿ, ಈ ದುರುಪಯೋಗ ಎಸಗಿದವರ ಮೇಲೆ ಕೈಗೊಳ್ಳಲಾದ ಕ್ರಮವೇನು;

ಆ) ಈ ಪ್ರಕರಣದಲ್ಲಿ ಸಮಿತಿಯವರು ಭಾಗಿಯಾಗಿದ್ದಾರೆಯೇ;

ಇ) ಈ ಪ್ರಕರಣದಲ್ಲಿ ತನಿಖಾ ವರದಿ ಬಂದಿದೆಯೇ, ಬಂದಿದ್ದರೆ ಯಾವ ಕ್ರಮ ಕೈಗೊಳ್ಳಲಾಗಿದೆ, ಕ್ರಮ ಕೈಗೊಳ್ಳದಿದ್ದರೆ ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಮುಂಡರಗಿ ತಾಲ್ಲೂಕು ಡೋಣಿ ಗ್ರಾಮ ಪಂಚಾಯತ್‌ನಲ್ಲಿ ಬರ ಪರಿಹಾರ ಮತ್ತು ಜಲರಕ್ಷಣೆ ಯೋಜನೆಗಳಲ್ಲಿ ಬಿಡುಗಡೆಯಾದ ಆಹಾರ ಧಾನ್ಯಗಳು ದುರುಪಯೋಗವಾಗಿರುವುದು ಸರಕಾರದ ಗಮನಕ್ಕೆ ಬಂದಿದೆ. ಈ ಸಂಬಂಧ ಸದರಿ ಗ್ರಾಮ ಪಂಚಾಯತ್ ಕಾರ್ಯದರ್ಶಿಯನ್ನು ಅಮಾನತ್ತು ಗೊಳಿಸಲಾಗಿದೆ.

ಆ) ಸಮಿತಿಯವರು ಭಾಗಿಯಾಗಿರುವುದಿಲ್ಲವೆಂದು ಜಿಲ್ಲಾ ಪಂಚಾಯತಿಯಿಂದ ವರದಿ ಬಂದಿದೆ.

ಇ) ತನಿಖಾ ವರದಿಯು ಜಿಲ್ಲಾ ಜಲಾನಯನ ಅಧಿಕಾರಿಗಳಿಂದ ಬಂದಿದೆ. ಸದರಿ ವಿಷಯವು ಇಲಾಖಾ ತನಿಖೆ ಪ್ರಗತಿಯಲ್ಲಿರುತ್ತದೆ. ಇಲಾಖಾ ವಿಚಾರಣೆ ಮುಗಿದ ನಂತರ, ತಕ್ಷಣವೇ ಸದರಿಯವರ ವಿರುದ್ಧ ಕ್ರಮ ಜರುಗಿಸಲಾಗುವುದು.

518 (573) ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶ್ರೀ ಶರಣಬಸವೇಶ್ವರ ವಿದ್ಯಾಪೀಠ (ರಿ). ಸಾ:ಕಲಕೇರಿ, ತಾ: ಮುಂಡರಗಿ ಇದು ಪ.ಜಾತಿ ಆಡಳಿತ ಮಂಡಳಿ ಹೊಂದಿದ್ದು ಈ ಸಂಸ್ಥೆಯ ವತಿಯಿಂದ ಗದಗ್ ಜಿಲ್ಲೆ ನರಗುಂದ ಪಟ್ಟಣದಲ್ಲಿ ಹಾಗೂ ಹಾವೇರಿ ಜಿಲ್ಲೆ ಹಾವೇರಿ ಪಟ್ಟಣದಲ್ಲಿ ನಡೆಯತಕ್ಕಂತಹ ಪ್ರೌಢಶಾಲೆಗಳನ್ನು ಅನುದಾನಕ್ಕೆ ಒಳಪಡಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಅನುದಾನಕ್ಕೆ ಒಳಪಡಿಸಿ ಆದೇಶವನ್ನು ಯಾವಾಗ ಹೊರಡಿಸಲಾಗುವುದು?